(ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್. ಪೂಜಾರ್‌ರವರು ಸಭಾತ್ಯಾಗ ಮಾಡಿದರು)

ರೈತರಿಗೆ ಬೆಳೆವಿಮೆ ಸೌಲಭ್ಯ

56(252) ಶ್ರೀ ಪಾಟೀಲ ಸಿದ್ಧಲಿಂಗನ ಗೌಡ ಸಿದ್ಧನ ಗೌಡ (ಮುಂಡರಗಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೆಳೆ ವಿಮೆ ಮಾಡಿದ ರೈತರಿಗೆ ವಿಮಾ ಸೌಲಭ್ಯ ಸಿಗಬೇಕಾದರೆ ಅನುಸರಿಸುವ ಮಾನದಂಡಗಳೇನು?

2. ಹಿಂದಿನ ಬೆಲೆ ಉತ್ಪಾದನೆಯನ್ನು ಸರಾಸರಿ (ಥ್ರೆಶೊಲ್ಡ್ ಯೀಲ್ಡ್) ಎಷ್ಟು ವರ್ಷಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು?

3. ಎಲ್ಲಾ ಬೆಳೆಗಳ ಥ್ರೆಶ್ ಮತ್ತು ಓಲ್ಡ್ ಯೀಲ್ಡ್ ಸರಾಸರಿ ಎಷ್ಟು? ತಾಲ್ಲೂಕು ಹಾಗೂ ಹೋಬಳಿವಾರು ವಿವರ ನೀಡುವುದು.

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

1. ವಿಮೆ ಬೆಳೆಯ ಮೇಲೆ ಸರ್ಕಾರದ ಅಧಿಸೂಚನೆ ಹೊರಡಿಸಿದ ತಾಲ್ಲೂಕಿನ ಪ್ರಸ್ತುತ ವರ್ಷದ ಸರಾಸರಿ ಇಳುವರಿಯು ಅದೇ ಬೆಳೆಯ ಅದೇ ತಾಲ್ಲೂಕಿನ ಭರವಸೆಯ ಇಳುವರಿಗಿಂತ ಕಡಿಮೆ ಬಂದಲ್ಲಿ ಮಾತ್ರ ಆ ತಾಲ್ಲೂಕಿನ ಸಂಬಂಧಿಸಿದ ಬೆಳೆಗೆ ವಿಮೆ ಮಾಡಿಸಿದ ಎಲ್ಲಾ ರೈತರು ಬೆಳೆ ನಷ್ಟ ಪ್ರಮಾಣದ ಪರಿಹಾರಧನವನ್ನು ಪಡೆಯಲು ಅರ್ಹರಾಗಿರುತ್ತಾರೆ.

2. ಒಂದು ಬೆಳೆಯ ಮೇಲೆ ಸರ್ಕಾರವು ಅಧಿಸೂಚನೆ ಹೊರಡಿಸಿದ ತಾಲ್ಲೂಕಿನ ಭರವಸೆ ಇಳುವರಿಯು ಅದೇ ಬೆಳೆಯ ಅದೇ ತಾಲ್ಲೂಕಿನ ಸತತ ಹಿಂದಿನ 3 ರಿಂದ 5 ವರ್ಷಗಳ ಇಳುವರಿ ದರಗಳ ಸರಾಸರಿ ಇಳುವರಿಯ (ಸಾಮಾನ್ಯ ಇಳುವರಿ) ಶೇಕಡ 60 ರಿಂದ 90 ರಷ್ಟಾಗುತ್ತದೆ. ಈ ಭರವಸೆ ಇಳುವರಿ ದರಗಳನ್ನು ಭಾರತ ಸರ್ಕಾರದ ಅಧೀನದಲ್ಲಿರುವ ಸಾಮಾನ್ಯ ವಿಮಾ ನಿಗಮದವರು ಕಂಡು ಹಿಡಿದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಕ್ಕೆ ಒದಗಿಸುತ್ತಾರೆ. ಭತ್ತ ಮತ್ತು ಗೋಧಿ ಬೆಳೆಗಳಿಗೆ ಸತತ ಹಿಂದಿನ 3 ವರ್ಷಗಳ ದರಗಳನ್ನು ಉಳಿದ ಬೆಳೆಗಳಿಗೆ ಸತತ ಹಿಂದಿನ 5 ವರ್ಷಗಳ ಇಳುವರಿ ದರಗಳನ್ನು ಸಾಮಾನ್ಯ ಇಳುವರಿ ಕಂಡು ಹಿಡಿಯಲು ಉಪಯೋಗಿಸಲಾಗುತ್ತದೆ.

3. 2001-2002ನೇ ಸಾಲಿನ ಮುಂಗಾರು ಋತುವಿಗೆ ರಾಷ್ಟ್ರೀಯ ಕೃಷಿ ಭೀಮಾ ಯೋಜನೆಯಡಿ ತಾಲ್ಲೂಕು ಮಟ್ಟದಲ್ಲಿ ಭತ್ತ, ಸಜ್ಜೆ, ಮುಸುಕಿನ ಜೋಳ, ಹೆಸರು, ಉದ್ದು, ಸೋಯಾ ಅವರೆ ಮತ್ತು ಸಾರ್ಯಕಾಂತಿ ಬೆಳೆಗಳನ್ನು ಹೋಬಳಿ ಮಟ್ಟದಲ್ಲಿ ಜೋಳ, ರಾಗಿ, ತೊಗರಿ ಮತ್ತು ನೆಲಗಡಲೆ ಬೆಳೆಗಳನ್ನು ಆರಿಸಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).